1. ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಕಾರ್ಯದರ್ಶಿ : ಮಾನ್ಯ ಸಭಾಧ್ಯಕ್ಷರ ಅನುಮತಿ ಮೇರೆಗೆ, ಪಿರಿಯಾಪಟ್ಟಣದ ಶಾಸಕರಾದ ಮಾನ್ಯ ಶ್ರೀ ಕೆ.ವೆಂಕಟೇಶ್‌ರವರನ್ನು ಪ್ರಮಾಣ ವಚನ/ಪ್ರತಿಜ್ಞಾ ವಚನ ಸ್ವೀಕಾರ ಮಾಡಲು ಆಹ್ವಾನಿಸುತ್ತೇನೆ.

ಶ್ರೀ ಕೆ.ವೆಂಕಟೇಶ್ (ಪಿರಿಯಾಪಟ್ಟಣ) : ಶ್ರೀ ಕೆ.ವೆಂಕಟೇಶ್ ಎಂಬ ಹೆಸರಿನವನಾದ ನಾನು ವಿಧಾನಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ.

ಅಧ್ಯಕ್ಷರು : ಈಗ ಸಂತಾಪ ಸೂಚನೆ

2. ಸಂತಾಪ ಸೂಚನೆ

ವಿಷಯ : ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಡಾ: ವಿ.ಎಸ್. ರಮಾದೇವಿ, ಮಾಜಿ ಸಚಿವರಾಗಿದ್ದ ಶ್ರೀ ಎಂ.ಎನ್.ನಾಗನೂರ, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ರಾಗಿದ್ದ ಶ್ರೀ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋಟಿ, ಶ್ರೀ ಕೆ.ಡಿ.ಪಾಟೀಲ್ ಹಾಗೂ ಖ್ಯಾತ ಗಾಯಕ ಡಾ:ಪಿ.ಬಿ. ಶ್ರೀನಿವಾಸ್‌ರವರುಗಳು ನಿಧನ ಹೊಂದಿರುವ ಬಗ್ಗೆ.

ಮಾನ್ಯ ಸಭಾಧ್ಯಕ್ಷರು:

ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಡಾ. ವಿ.ಎಸ್.ರಮಾದೇವಿ ಮತ್ತು ರಾಜ್ಯದ ಮಾಜಿ ಸಚಿವರಾಗಿದ್ದ ಎಂ.ಎನ್ ನಾಗನೂರ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋಟಿ, ಕೆ.ಡಿ. ಪಾಟೀಲ್ ಹಾಗೂ ಖ್ಯಾತ ಗಾಯಕ ಡಾ. ಪಿ.ಬಿ. ಶ್ರೀನಿವಾಸ್ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.